# ಮಾದರಿ ಪ್ರಶ್ನೆ ಪತ್ರಿಕೆ – 02

**ತರಗತಿ: 10** **2022-23** **ಗರಿಷ್ಠ ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** **ಅವಧಿ: 3ಗಂಟೆ 15ನಿಮಿಷ**

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ. **8 X 1 =8**

**1.** ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವ ಮನೆಮಾಡಲು ಕಾರಣ

A) ಎರಡನೇ ಷಾ ಆಲಂನನ್ನು ಮರಾಠರು ದೆಹಲಿ ಸಿಂಹಾಸನದಲ್ಲಿ ಕುಳ್ಳಿರಿಸಿದರು.

B) ರಘೋಬನಿಗೆ ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ದೊರೆಯಲಿಲ್ಲ.

C) ರಘೋಬನು ಬ್ರಿಟಿಷರ ಬೆಂಬಲ ಕೋರಿದನು.

D) ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು.

**2.** 42ನೇ ತಿದ್ದುಪಡಿ ಪ್ರಕಾರ ನಮ್ಮ ಸಂವಿಧಾನಕ್ಕೆ ಸೇರಿಸಲಾದ ಪದಗಳೆಂದರೆ

A) ಸಮಾನತೆ ಮತ್ತು ಸಮಾಜವಾದ B) ಸಮಾಜವಾದ ಮತ್ತು ಗಣತಂತ್ರ

C) ಸಾರ್ವಭೌಮ ಮತ್ತು ಪ್ರಜಾಸತ್ತಾತ್ಮಕ D) ಜಾತ್ಯತೀತ ಮತ್ತು ಸಮಾಜವಾದ

**3.** ಪ್ರಾದೇಶಿಕ ಸಮಾನತೆಯನ್ನು ತರಲು ಕರ್ನಾಟಕ ಸರ್ಕಾರ ನೇಮಿಸಿದ ಆಯೋಗ

A) ಮಹಾಜನ್ ಆಯೋಗ B) ಡಾ. ಡಿ.ಎಂ.ನಂಜುಂಡಪ್ಪ ಆಯೋಗ

C) ಡಾ.ಕಸ್ತೂರಿರಂಗನ್ ಆಯೋಗ D) ಫಜಲ್ ಅಲಿ ಆಯೋಗ

**4.** 'ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದವರು

A) ಗಾಂಧೀಜಿ B) ಪಂಪ C) ಡಾ.ಬಿ.ಆರ್.ಅಂಬೇಡ್ಕರ್ D) ಪೊನ್ನ

**5.** ಚಿಪ್ಕೋ ಚಳುವಳಿ ನಡೆದ ರಾಜ್ಯ

A) ಕರ್ನಾಟಕ B) ಕೇರಳ C) ಉತ್ತರ ಪ್ರದೇಶ D) ಗುಜರಾತ್

**6.** ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವುದು

A) ಗಂಗಾನಗರ – ಅತಿ ಹೆಚ್ಚು ಮಳೆ B) ರೂಯ್ಲಿ – ಅತಿ ಹೆಚ್ಚು ಉಷ್ಣಾಂಶ

C) ಮಾಸಿನ್‌ರಾಮ್ – ಅತಿ ಕಡಿಮೆ ಮಳೆ D) ಕಾಫಿ ತುಂತುರು – ಬೇಸಿಗೆಕಾಲದ ಮಳೆ

**7.** ನೀತಿ ಆಯೋಗವು ಸ್ಥಾಪನೆಯಾದದ್ದು

A) 1945, ಅಕ್ಟೋಬರ್ 24 B) 1962, ಮಾರ್ಚ್ 15

C) 1949, ನವೆಂಬರ್ 26 D) 2015, ಜನವರಿ 1

**8.** 1962ರಲ್ಲಿ ಜಾನ್ ಎಫ್. ಕೆನಡಿ ಅಮೇರಿಕನ್ನರಿಗೆ ನೀಡಿದ ಗ್ರಾಹಕರ ಹಕ್ಕುಗಳು

A) ಸಂರಕ್ಷಣೆ, ಮಾಹಿತಿ, ನಿವೇದನೆ, ಪರಿಹಾರ B) ಮಾಹಿತಿ, ನಿವೇದನೆ, ಪರಿಹಾರ, ಸಮಾನತೆ

C) ಸಂರಕ್ಷಣೆ, ಮಾಹಿತಿ, ವಿಧೇಯತೆ, ಸಂಗ್ರಹಣೆ D) ಗುಣಮಟ್ಟ, ಸಂರಕ್ಷಣೆ, ಮಾಹಿತಿ, ನಿವೇದನೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 X 1 =8**

**9.** ಬಾಲ ಕಾರ್ಮಿಕ ಎಂದರೆ ಯಾರು?

**10.** ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನು ಪ್ರಾರಂಭಿಸಿದವರು ಯಾರು?

**11.** ಸರ್ದಾರ್ ವಲ್ಲಭಭಾಯ್ ಪಟೇಲರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದು ಏಕೆ ಕರೆಯಲಾಗಿದೆ?

**12.** 1948ರ ಡಿಸೆಂಬರ್ 10 ಮಾನವ ಇತಿಹಾಸದಲ್ಲೇ ಅತ್ಯಂತ ಮಹತ್ವದ ದಿನ. ಏಕೆ?

**13.** ವಾಣಿಜ್ಯ ಬೇಸಾಯ ಎಂದರೇನು?

**14.** ಅಭ್ರಕವನ್ನು ಟೆಲಿಫೋನ್‌ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಏಕೆ?

**15.** ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಯಾರು ಮಂಡಿಸುತ್ತಾರೆ?

**16.** ಭಾರತದಲ್ಲಿ ಬ್ಯಾಂಕುಗಳ ಬ್ಯಾಂಕು ಎಂದು ಯಾವುದನ್ನು ಕರೆಯುತ್ತಾರೆ?



SSSJF DIGITAL GROUP

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ : 8 X 2 =16**

**17.** ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.

**18.** 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

**19.** ಲಾಭಕೋರತನಕ್ಕೆ ಕಾರಣಗಳಾವುವು?

**ಅಥವಾ**

ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳೇನು?

**20.** ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗು. ಹೇಗೆ?

**ಅಥವಾ**

ಬಾಲ್ಯ ವಿವಾಹ ಒಂದು ಅನಿಷ್ಟ ಪದ್ಧತಿ. ಹೇಗೆ?

**21.** ಮಳೆಕೊಯ್ಲು ಅಥವಾ ಮಳೆ ನೀರಿನ ಸಂಗ್ರಹಣೆ ಇಂದು ಕಡ್ಡಾಯವಾಗಿದೆ. ಏಕೆ?

**22.** ಕಡಲ ಕೊರೆತವನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳನ್ನು ವಿವರಿಸಿರಿ.

**23.** ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?

**24.** ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕರ ಹಿತಾಸಕ್ತಿಗಳನ್ನು ಕಾಪಾಡಲು ನೀಡಿರುವ ಯಾವುದಾದರೂ ನಾಲ್ಕು ಹಕ್ಕುಗಳನ್ನು ತಿಳಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : 9 X 3 =27**

**25.** ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು? ವಿವರಿಸಿ.

**ಅಥವಾ**

ಬ್ರಿಟಿಷರ ಕಂದಾಯ ಪದ್ಧತಿಯು ಭಾರತೀಯ ರೈತರ ಮೇಲೆ ಹೇಗೆ ದುಷ್ಪರಿಣಾಮ ಬೀರಿತು?

**26.** 4ನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

**27.** ಮುಸಲೋನಿಯ ಫ್ಯಾಸಿಸ್ಟ್‌ವಾದವು ಅತ್ಯಂತ ಕ್ರೂರವಾಗಿತ್ತು. ಸಮರ್ಥಿಸಿ.

**28.** ಭಾರತ ಮತ್ತು ಅಮೇರಿಕಾ ದೇಶಗಳ ನಡುವಿನ ಸಂಬಂಧವು ಸೌಹಾರ್ದಯುತವಾಗಿದೆ. ಸ್ಪಷ್ಟೀಕರಿಸಿ.

**29.** ನಿರುದ್ಯೋಗಕ್ಕೆ ಕಾರಣಗಳೇನು? ವಿವರಿಸಿ.

**30.** ಮಣ್ಣಿನ ಸವೆತಕ್ಕೆ ಕಾರಣಗಳೇನು?

**ಅಥವಾ**

ನಿತ್ಯ ಹರಿದ್ವರ್ಣದ ಅರಣ್ಯಗಳು ಮತ್ತು ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳ ನಡುವಿನ ವ್ಯತ್ಯಾಸಗಳೇನು?

**31.** ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ಬಂದರುಗಳನ್ನು ಪಟ್ಟಿ ಮಾಡಿ.

**32.** ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿಯ ಪಾತ್ರವನ್ನು ವಿವರಿಸಿ.

**ಅಥವಾ**

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

**33.** ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು?

**ಅಥವಾ**

ಉದ್ಯಮಶೀಲತೆಯ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ : 4 X 4 =16**

**34.** ಭಾರತೀಯ ಸಮಾಜ ಸುಧಾರಣೆಗೆ ದಯಾನಂದ ಸರಸ್ವತಿಯವರು ಹೇಗೆ ಪ್ರಯತ್ನಿಸಿದರು?

**35.** 1857ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿರಿ.

**ಅಥವಾ**

ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.

**36.** ಸಾಮಾನ್ಯ ಸಭೆಯ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ವಿವರಿಸಿ.

**37.** ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5**

**a)** ಬಾಕ್ರಾನಂಗಲ್ **b)** ಭಾರತದ ಚಹದ ಬಂದರು

**b)** ಕರ್ಕಾಟಕ ಸಂಕ್ರಾಂತಿ ವೃತ್ತ **d)** ಚೆನ್ನೈ



SSTF DIGITAL GROUP